**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | : | 472 (598) |
| 2 | ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ: | : | 20-08-2026 |
| 4 | ಉತ್ತರಿಸುವವರು | : | ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಅಭಿವೃದ್ಧಿ ಒಳಗೊಂಡಂತೆ ಹೊಸದಾಗಿ ಸ್ಥಾಪಿಸಿರುವ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಇದರ ಆಡಳಿತಾತ್ಮಕ ರಚನೆ ಮತ್ತು ಅಧಿಕಾರ ವಿಕೇಂದ್ರೀಕರಣ ಹೇಗೆ ನಡೆಯಲಿದೆ; (ಸಂಪೂರ್ಣ ಮಾಹಿತಿ ನೀಡುವುದು) | ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024 ರನ್ವಯ ಹಿಂದಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು 5 ನಗರ ಪಾಲಿಕೆಗಳಾಗಿ ವಿಂಗಡಿಸಿ, ಬೆಂಗಳೂರು ಉತ್ತರ ನಗರ ಪಾಲಿಕೆ, ಬೆಂಗಳೂರು ಪಶ್ಚಿಮ ನಗರ ಪಾಲಿಕೆ, ಬೆಂಗಳೂರು ಕೇಂದ್ರ ನಗರ ಪಾಲಿಕೆ, ಬೆಂಗಳೂರು ದಕ್ಷಿಣ ನಗರ ಪಾಲಿಕೆ ಹಾಗೂ ಬೆಂಗಳೂರು ಪೂರ್ವ ನಗರ ಪಾಲಿಕೆ ಎಂದು ಹೆಸರಿಸಲಾಗಿದೆ. ಎಲ್ಲಾ 5 ನಗರ ಪಾಲಿಕೆಗಳು ಸ್ವಾಯತ್ತತೆ ಹೊಂದಿರುತ್ತವೆ.<br><br>ಮೇಲಿನ ಅಧಿನಿಯಮದ ಅನುಸಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರವನ್ನು ರಚಿಸಲಾಗಿದ್ದು, ಸದರಿ ಪ್ರಾಧಿಕಾರವು ಗ್ರೇಟರ್ ಬೆಂಗಳೂರು ಪ್ರದೇಶದಲ್ಲಿನ ಎಲ್ಲಾ ನಗರ ಪಾಲಿಕೆಗಳು ಮತ್ತು ಇತರೆ ನಾಗರಿಕ ಏಜೆನ್ಸಿಗಳ ನಡುವೆ ಸಮನ್ವಯದ ಪಾತ್ರವನ್ನು ನಿರ್ವಹಿಸುತ್ತದೆ. ಸದರಿ ಪ್ರಾಧಿಕಾರಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಪದನಿಮಿತ್ತ ಅಧ್ಯಕ್ಷರಾಗಿರುತ್ತಾರೆ. |
| ಆ) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆಯಿಂದ ಸ್ಥಳೀಯ ಮಹಾನಗರ ಪಾಲಿಕೆ (ಮೇಯರ್ ಮತ್ತು ಕೌನ್ಸಿಲರ್ ಗಳ ಸ್ವಾಯುತ್ತತೆ ಮತ್ತು ಅಧಿಕಾರ ಮೊಟಕುಗೊಳ್ಳುತ್ತದೆಯೇ; ಹಾಗೂ ಇದರ ಕಾರ್ಯ ವಿಧಾನಗಳೇನು? ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎನ್ನುವ ಸಂವಿಧಾನದ 74ನೇ ತಿದ್ದುಪಡಿಯ ಆಶಯಕ್ಕೆ ಈ ಪ್ರಾಧಿಕಾರ ಧಕ್ಕೆ ತರುವುದಿಲ್ಲವೇ; (ವಿವರ ನೀಡುವುದು) | ಗ್ರೇಟರ್ ಬೆಂಗಳೂರು ಪ್ರಾಧಿಕಾರದ ರಚನೆಯಿಂದ ಸ್ಥಳೀಯ ನಗರಪಾಲಿಕೆ ಮೇಯರ್ ಮತ್ತು ಕೌನ್ಸಿಲರ್‌ಗಳ ಸ್ವಾಯುತ್ತತೆ ಮತ್ತು ಅಧಿಕಾರ ಮೊಟಕುಗೊಳ್ಳುವುದಿಲ್ಲ. ಇದರ ಕಾರ್ಯ ವಿಧಾನಗಳು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024 ರಂತೆ ಇರುತ್ತದೆ.<br><br>ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚಿನ ಅಧಿಕಾರ ನೀಡಬೇಕು ಎನ್ನುವ ಸಂವಿಧಾನದ 74ನೇ ತಿದ್ದುಪಡಿಯ ಆಶಯಕ್ಕೆ ಈ ಪ್ರಾಧಿಕಾರ ಧಕ್ಕೆ ತರುವುದಿಲ್ಲ ಹಾಗೂ ಧಕ್ಕೆ ತರುವಂತಹ ಯಾವುದೇ ಪ್ರಾವಿಧಾನಗಳು ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ 2024 ನಲ್ಲಿರುವುದಿಲ್ಲ.<br><br>ಅಧಿನಿಯಮದ ಅನುಸಾರ ಗ್ರೇಟರ್ ಬೆಂಗಳೂರು ಪ್ರಾಧಿಕಾರ ಮತ್ತು ಬೆಂಗಳೂರು ನಗರ ಪಾಲಿಕೆಗಳ ಅಧಿಕಾರ ಮತ್ತು ಜವಾಬ್ದಾರಿ ವ್ಯಾಪ್ತಿ ಪ್ರತ್ಯೇಕ ಹಾಗೂ ಸ್ಪಷ್ಟವಾಗಿರುತ್ತದೆ. ಸಂವಿಧಾನದ 74ನೇ ತಿದ್ದುಪಡಿಯಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಒದಗಿಸಲಾದ ಎಲ್ಲಾ ಅಧಿಕಾರ ಮತ್ತು ಜವಾಬ್ದಾರಿಗಳನ್ನು ನಿರ್ದಿಷ್ಟವಾಗಿ ಬೆಂಗಳೂರು ನಗರ ಪಾಲಿಕೆಗಳಿಗೆ ಅಧಿನಿಯಮದ ಮೊದಲನೇ ಅನುಸೂಚಿಯ ಮೂಲಕ ನೀಡಲಾಗಿದೆ. |

...2...

| | | |
|---|---|---|
| ಇ) | ಹಳೆಯ ಬಿಬಿಎಂಪಿಯನ್ನು ಬೆಂಗಳೂರು ಕೇಂದ್ರ, ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ ಎಂದು 5-ನಗರ ಪಾಲಿಕೆಗಳಾಗಿ ವಿಭಜಿಸಿರುವುದರಿಂದ ಆಡಳಿತಾತ್ಮಕ ವೆಚ್ಚ ಹೆಚ್ಚಾಗುವುದಲ್ಲವೇ ಪಾಲಿಕೆಗಳ ಗಡಿ ಗುರುತಿಸುವಿಕೆ ಮತ್ತು ನಿಯಮಾವಳಿಗಳ ಬಗ್ಗೆ ಸಾರ್ವಜನಿಕರು ಸಲ್ಲಿಸಿರುವ ಆಕ್ಷೇಪಣೆಗಳು ಹಾಗೂ ಸಲಹೆಗಳನ್ನು ಸರ್ಕಾರ ಹೇಗೆ ಪರಿಗಣಿಸಿದೆ; | ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮದ ಮೂಲ ಉದ್ದೇಶವು ವಿಕೇಂದ್ರೀಕೃತ, ಸಹಭಾಗಿ, ದಕ್ಷ, ಪರಿಣಾಮಕಾರಿ ಮತ್ತು ಸ್ಪಂದನ ಶೀಲ ಆಡಳಿತವನ್ನು ನೀಡುವುದಾಗಿದೆ. ಈ ಹಿನ್ನೆಲೆಯಲ್ಲಿ, 05 ನಗರ ಪಾಲಿಕೆಗಳನ್ನು ರಚಿಸಲಾಗಿರುವುದರಿಂದ ಆಡಳಿತಾತ್ಮಕ ವೆಚ್ಚ ಅಲ್ಪಮಟ್ಟಿಗೆ ಹೆಚ್ಚಾಗಲಿದೆ. ಸಾರ್ವಜನಿಕರಿಗೆ ಲಭ್ಯವಾಗುವ ಪರಿಣಾಮಕಾರಿ ಹಾಗೂ ವಿಕೇಂದ್ರೀಕೃತ ಆಡಳಿತವನ್ನು ಈ ವೆಚ್ಚ ಹೆಚ್ಚಳದೊಂದಿಗೆ ಹೋಲಿಸಲು ಸಾಧ್ಯವಿರುವುದಿಲ್ಲ.<br><br>ಗ್ರೇಟರ್ ಬೆಂಗಳೂರು ಆಡಳಿತ ಅಧಿನಿಯಮ, 2024ರ ಕಲಂ 5 ಮತ್ತು 7ರ ಅವಕಾಶಗಳ ಅನ್ವಯ ಗೌರವಾನ್ವಿತ ರಾಜ್ಯಪಾಲರ ಅನುಮೋದನೆ ಪಡೆದು, 05 ನಗರ ಪಾಲಿಕೆಗಳ ಗಡಿಗಳನ್ನು ಗುರುತಿಸಿ 30 ದಿನಗಳ ಕಾಲಾವಧಿಯಲ್ಲಿ ಸಲಹೆ / ಆಕ್ಷೇಪಣೆಗಳನ್ನು ಆಹ್ವಾನಿಸಿ ದಿನಾಂಕ :19-07-2025 ರಂದು ಅಧಿಸೂಚನೆ ಹೊರಡಿಸಲಾಗಿದೆ. ನಿಗದಿತ ಅವಧಿಯಲ್ಲಿ ಒಟ್ಟು 55 ಸಲಹೆ / ಆಕ್ಷೇಪಣೆಗಳು ಸ್ವೀಕೃತಗೊಂಡಿದ್ದು, ಅವುಗಳನ್ನು ಪರಿಗಣಿಸಿ, ಪ್ರಸ್ತಾವನೆಗೆ ಗೌರವಾನ್ವಿತ ರಾಜ್ಯಪಾಲರ ಅನುಮೋದನೆ ಪಡೆದು, ದಿನಾಂಕ : 02-09-2025ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿರುತ್ತದೆ. |
| ಈ) | ಐಟಿ ಹಬ್‌ಗಳಿರುವ ಪೂರ್ವ ಬೆಂಗಳೂರಿಗೆ ಹೋಲಿಸಿದರೆ ಉಳಿದ ಪಾಲಿಕೆಗಳಲ್ಲಿ ತೆರಿಗೆ ಸಂಗ್ರಹ ಕಡಿಮೆ ಇರುವುದರಿಂದ ಈ ಆರ್ಥಿಕ ಅಸಮಾನತೆಯನ್ನು ನೀಗಿಸಲು ಪ್ರಾಧಿಕಾರದ ಬಳಿ ಇರುವ ಯೋಜನೆಗಳೇನು; | ಎಲ್ಲಾ ನಗರ ಪಾಲಿಕೆಗಳು ತಮ್ಮ ವ್ಯಾಪ್ತಿಯಲ್ಲಿನ ತೆರಿಗೆ ವ್ಯಾಪ್ತಿಗೆ ಒಳಪಡದ ಆಸ್ತಿಗಳನ್ನು ಗುರುತಿಸಿ ಆಸ್ತಿ ತೆರಿಗೆ ವ್ಯಾಪ್ತಿಗೆ ಸೇರ್ಪಡೆಗೊಳಿಸುವುದು; ತೆರಿಗೆದಾರರು ಸಲ್ಲಿಸಿರುವ ಆಸ್ತಿ ತೆರಿಗೆ ವಿವರಗಳನ್ನು (Property Tax Returns) ಪರಿಶೀಲಿಸಿ ವ್ಯತ್ಯಾಸಗಳಿದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದು; ಬಾಕಿ ತೆರಿಗೆಗಳ ಪರಿಣಾಮಕಾರಿ ವಸೂಲಾತಿ; ಬಿ-ಖಾತೆ ಆಸ್ತಿಗಳನ್ನು ನಿಯಮಾನುಸಾರ ಎ-ಖಾತೆಗೆ ಪರಿವರ್ತಿಸಿ ತೆರಿಗೆ ವ್ಯಾಪ್ತಿಯನ್ನು ವಿಸ್ತರಿಸುವುದು; ಹಾಗೂ ಡಿಜಿಟಲ್ ವ್ಯವಸ್ಥೆಗಳ ಮೂಲಕ ತೆರಿಗೆ ಸಂಗ್ರಹಣೆಯನ್ನು ಮತ್ತಷ್ಟು ಬಲಪಡಿಸುವುದು ಹೀಗೆ ಹಲವು ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಉ) | ವಾರ್ಡ್‌ಗಳ ಮರುವಿಂಗಡಣೆ ಮತ್ತು ಮತದಾರ ಪಟ್ಟಿ ಸಿದ್ಧತೆಯ ನೆಪದಲ್ಲಿ ಮಹಾನಗರ ಪಾಲಿಕೆಗಳ ಚುನಾವಣೆಯನ್ನು ಇನ್ನು ಎಷ್ಟು ದಿನ ಮುಂದೂಡಲಾಗುತ್ತದೆ? | ಈಗಾಗಲೇ 05 ಬೆಂಗಳೂರು ನಗರ ಪಾಲಿಕೆಗಳಲ್ಲಿ ವಾರ್ಡ್‌ಗಳನ್ನು ಮರು ವಿಂಗಡಣೆ ಮಾಡಿ ಮೀಸಲಾತಿಯನ್ನು ನಿಗದಿಪಡಿಸಿ ರಾಜ್ಯ ಚುನಾವಣಾ ಆಯೋಗಕ್ಕೆ ಒದಗಿಸಲಾಗಿರುತ್ತದೆ.<br><br>ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ರ ಪ್ರಕ್ರಿಯೆಯು ಪ್ರಸ್ತುತ ಜಾರಿಯಲ್ಲಿದ್ದು, ಭಾರತ ಚುನಾವಣಾ ಆಯೋಗ ರವರ ನಿರ್ದೇಶನದಂತೆ ಅಂತಿಮ ಮತದಾರರ ಪಟ್ಟಿಯನ್ನು ದಿನಾಂಕ:27.10.2026 ರಂದು ಪ್ರಕಟಿಸಲಾಗುತ್ತದೆ. ನಂತರ ರಾಜ್ಯ ಚುನಾವಣಾ ಆಯೋಗದಿಂದ ಗ್ರೇಟರ್ ಬೆಂಗಳೂರು ಪ್ರದೇಶದ 05 ನಗರ ಪಾಲಿಕೆಗಳಿಗೆ ಚುನಾವಣೆ ನಡೆಸಲು ಕ್ರಮವಹಿಸಲಾಗುತ್ತದೆ. |

**ಸಂಖ್ಯೆ:ನಅಇ 281 ಬಿಬಿಎಸ್ 2026**

**(ಕೃಷ್ಣ ಬೈರೇಗೌಡ)**
**ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವರು**